


ಎಡದಿಂದ ಬಲಕ್ಕೆ:

1. ಮುಂದುವರೆದು ನಿಂತವರ ಕೈಯಲ್ಲೊಂದು ಸುಂದರ ಹೂವು (3)
3. ಕುಹಕ ನುಡಿವವರ ಪ್ರತಿಬಿಂಬ ತೋರಿದ ಸಾಧನ ಗೊತ್ತೇ? (3)
4. ತಾಮಸ ಗುಣದವರ ಸಂಖ್ಯೆ ಅನಂತ ಏನಲ್ಲ (3)
6. ತೆಳ್ಳಗೇ ಇದ್ದಾಳೆ ನೋಡಿ ಸ್ನೇಹಿತೆ (3)
7. ಅವನ ಅಜ್ಜನೂ ಈ ಭೂಮಿಯಲ್ಲೇ ಹುಟ್ಟಿದವ ತಾನೇ? (4)
9. ಸಸ್ಯದಾರ, ಮತ್ಸರದ ಆಧಾರ– ಎರಡೂ ಒಟ್ಟಾಗಿ ಔಷಧಿಗೆ (4)
11. ಗಂಡಸರ ಗುಂಪಿನಲ್ಲಿ ಏನು ಈ ಸಂಭ್ರಮ? (4)
13. ರಭಸದಿಂದ ಬಂದಾಗಲೇ ರುಚಿ ಭಗ್ನವಾಯಿತು (4)
15. ಪದ್ಮನಾಭನ ವಾಸಕ್ಕೇ ಭಾರೀ ಕಟ್ಟಡ (3)
17. ನೌಕರರು ಕೇಳಿದ್ದಕ್ಕೆಲ್ಲ ಇಲ್ಲ ಎಂದರೇ? (3)
18. ತಿಜೋರಿಯ ತುಂಬ ಬರೀ ಬೆಳ್ಳಿ (3)
19. ಕವಿತೆ ಓದಲು ಎಷ್ಟು ಆತುರ ನೋಡಿ (3)

ಮೇಲಿಂದ ಕೆಳಕ್ಕೆ:

1. ಮಂಡೆಗೆ ಹೊಳೆಯಿತು ಹೇಗೆ ಈ ಭಕ್ಷ್ಯ? (3)
2. ಸಂತರ ಖರ್ಚಿಗೆ ಹಣ ನೀಡಿದ್ದರ ದಾಖಲೆ ಇದು (3)
3. ಕಂಬನಿ ಸುರಿಸಿ ನೋಡ ಹೋದದ್ದು ಮೈಸೂರಿನ ಸನಿಹದ ನದಿ (3)
5. ತೇರೆಳೆಯುವ ಮೊದಲು ಚಿಗುರು ತನ್ನಿ (3)
7. ಅನ್ನ ಪಾಯಸ ಮಾಡಲು ಕಿಂಚಿತ್ತೂ ಶ್ರಮ ಇಲ್ಲ ಬಿಡಿ (4)
8. ಗಾಜು ತರಲು ನೆರವಿಗೆ ಬಂದ ಸ್ನೇಹಿತ, ಸಹಚರ (4)
9. ಸರದಾರನ ಮನೆಯಲ್ಲಿ ಓಲಗ ನೋಡಿ (4)
10. ಘೋರ ರೂಪದ ಈಶ್ವರನನ್ನು ಕುರಿತ ಭಾರೀ ಹೋಮ (4)
12. ಯಾವುದೋ ಗುಂಗಿನಲ್ಲಿ ಕಂಡ ಆಕಾಶ (3)
14. ಸಾಮಾನುಗಳನ್ನು ತಂದದ್ದರ ಸಂಗಡ... (3)
15. ಭರ್ತಿ ಕಡಲಿನ ಉಬ್ಬರ (3)
16. ಕರೆತಂದವನ ಪಾಲಿಗೆ ಯಾತನೆಯ ನೆಲೆ (3)

## ಪದಬಂಧ: 18-11-2010ರ ಉತ್ತರಗಳು

ಎಡದಿಂದ ಬಲಕ್ಕೆ:

1. ಅಸದೃಶ; 3. ಬಲ್ಲವ; 4. ಹಡಗು; 6. ನಿರಾಧಾರ; 7. ಕಂದುಕ; 9. ಕುಲುಮೆ; 11. ನಿಲಯ; 13. ರಸನೆ; 15. ಕುಟಿಲತೆ; 17. ಟಪಾಲು; 18. ರಮಿಸು; 19. ಕುಳಿರ್ಗಾಳಿ.

ಮೇಲಿಂದ ಕೆಳಕ್ಕೆ:

1. ಅವನಿ; 2. ಶಹರ; 3. ಬರಿದು; 5. ಗುಡಿಲು; 7. ಕಂಬನಿ; 8. ಕಡಾಯ; 9. ಕುಮಾರ; 10. ಮೆಲ್ಲನೆ; 12. ಲಲಾಟ; 14. ಸಲೀಸು; 15. ಕುಲುಕು; 16. ತೆರಳಿ.

# ಖಗ-ವಿಶೇಷ

## ‘ಹಮ್ಮಿಂಗ್ ಬರ್ಡ್’- ಏನು ವಿಶೇಷ?

**ಅ**ದೊಂದು ಹಕ್ಕಿ. ‘ಹಮ್ಮಿಂಗ್ ಬರ್ಡ್’ ಎಂಬ ಹೆಸರೇ ಅದರ ಮೊದಲ ವಿಶೇಷ. ಈ ಹಕ್ಕಿ ಹಾರುವಾಗ ಅದರ ರೆಕ್ಕೆ ಬಡಿತದಿಂದ ಹೊಮ್ಮುವ ಝೇಂಕಾರ ಶಬ್ದವೇ ಈ ಹೆಸರಿನ ಮೂಲ. ಹಾರಾಟ ನಿರತ ದುಂಬಿ ಕಣಜ ಜೇನ್ನೊಣಗಳ ರೆಕ್ಕೆ ಬಡಿತದ ಶಬ್ದದಂತೆಯೇ ಕೇಳಿಸುವ ಈ ಶಬ್ದದಿಂದಾಗಿಯೇ ಈ ಹಕ್ಕಿ ‘ಹಮ್ಮಿಂಗ್ ಬರ್ಡ್’ ಅಥವಾ ‘ಝೇಂಕಾರದ ಹಕ್ಕಿ’ ಎಂದೇ ಪ್ರಸಿದ್ಧ.

ಹಾಗೆಂದು ಹಮ್ಮಿಂಗ್ ಬರ್ಡ್‌ನ ವಿಶೇಷ ಇದೊಂದೇ ಎಂದು ಭಾವಿಸಿ ಬಿಡಬೇಡಿ. ಈ ಹಕ್ಕಿಯ ಇತರ ಪ್ರಧಾನ ವಿಸ್ಮಯ-ವೈಶಿಷ್ಟ್ಯಗಳು:

ಇಡೀ ಪಕ್ಷಿ ಸಾಮ್ರಾಜ್ಯದಲ್ಲಿ ಹಮ್ಮಿಂಗ್ ಬರ್ಡ್‌ಗಳದು ಅತಿ ಚಿಕ್ಕ ಗಾತ್ರಕ್ಕೆ ಹೆಸರಾದ ಕುಟುಂಬ. ಈ ಹಕ್ಕಿಗಳ ಒಟ್ಟು ಮುನ್ನೂರ ಹತ್ತೊಂಬತ್ತು ಪ್ರಭೇದಗಳ ಪೈಕಿ ಎರಡು ನೂರು ಪ್ರಭೇದಗಳು ಬೇರೆ ಯಾವುದೇ ಪುಟ್ಟ ಹಕ್ಕಿಗಿಂತಲೂ ಗಾತ್ರದಲ್ಲಿ ಚಿಕ್ಕವು. ಅವುಗಳಲ್ಲೂ ‘ಕ್ಯಾಲಿಸ್ಟೇ ಹೆಲೀನೇ’ ಹಕ್ಕಿಯದು ಕುಬ್ಜ ಗಾತ್ರದಲ್ಲಿ ವಿಶ್ವ ದಾಖಲೆ (ಚಿತ್ರ ನೋಡಿ). ಈ ಹಕ್ಕಿಯ ಉದ್ದ-ಕೊಕ್ಕಿನ ತುದಿಯಿಂದ ಬಾಲದ ಅಂಚಿನವರೆಗೆ- ಕೇವಲ ಐದು ಸೆಂಮೀ! ಅದರ ಇಡೀ ಶರೀರ ತೂಕ ಎರಡೇ ಗ್ರಾಂ! ಒಟ್ಟೂ ಗಾತ್ರ ನಿಮ್ಮ ಕೈ ಹೆಬ್ಬೆರಳ ಗಾತ್ರವನ್ನು ಮೀರುವುದಿಲ್ಲ!

ರೆಕ್ಕೆ ಬಡಿವ ವೇಗದಲ್ಲೂ ‘ಹಮ್ಮಿಂಗ್ ಬರ್ಡ್’ಗಳದು ವಿಶ್ವದಾಖಲೆ. ಕೆಲ ಪ್ರಭೇದಗಳು ಹಾರುವಾಗ ಅವುಗಳ ರೆಕ್ಕೆಗಳು ಪ್ರತಿ ಸೆಕೆಂಡ್‌ಗೆ ನಲವತ್ತರಿಂದ ಎಂಬತ್ತು ಬಾರಿ ಬಡಿಯುತ್ತವೆ. ಅಷ್ಟು ಭರದ ರೆಕ್ಕೆ ಬಡಿತ ದಿಂದಾಗಿಯೇ ಝೇಂಕಾರದ ಶಬ್ದ.

ಹಾರಾಟ ಕೌಶಲ್ಯಗಳಲ್ಲೂ ಹಮ್ಮಿಂಗ್ ಬರ್ಡ್‌ಗಳಿಗೆ ಬೇರಾವ ಹಕ್ಕಿಯೂ ಸಾಟಿ ಇಲ್ಲ. ಇಡೀ ಖಗಜಗದಲ್ಲಿ ಈ ಹಕ್ಕಿಗಳು ಮಾತ್ರವೇ ಹಾರುತ್ತಲೇ ಅಲುಗಡದೆ ನಿಲ್ಲಬಲ್ಲವು; ನಿಂತಲ್ಲೇ ತೇಲಬಲ್ಲವು; ಹಿಮ್ಮುಖವಾಗಿಯೂ ಹಾರಬಲ್ಲವು. ಹೆಬ್ಬೆರಳಷ್ಟೇ ಗಾತ್ರವಿದ್ದೂ ಈ ಹಕ್ಕಿಗಳು ತಾಸಿಗೆ ನಲವತ್ತೈದು ಕಿ.ಮೀ. ವೇಗದಲ್ಲಿ ಹಾರುವ ಸಾಮರ್ಥ್ಯ ಹೊಂದಿವೆ!

ಅಂದ-ಚೆಂದಗಳಲ್ಲೂ ಹಮ್ಮಿಂಗ್ ಬರ್ಡ್‌ಗಳು ಅಸದೃಶ. ಅತಿ ಉಜ್ವಲ, ಬಹು ವರ್ಣಮಯ ರೆಕ್ಕೆ-ಪುಕ್ಕಗಳ ಈ ಹಕ್ಕಿಗಳದು ಸ್ವರ್ಗೀಯ ಸೊಬಗು; ಜೀವಂತ ರತ್ನಾಭರಣ ಸದೃಶ ರೂಪ!

ಎಷ್ಟೆಲ್ಲ ಎಂಥವೆಲ್ಲ ವಿಶೇಷಗಳು, ನೋಡಿದಿರಾ?



■ ಎನ್.ವಾಸುದೇವ್